**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಎಸ್.ಸಿ.ನಂ.74/2020**

**ಪಿಡಬ್ಲ್ಯೂ- 02 (ಸಿಡಬ್ಲ್ಯೂ-12)**

ಸಾಕ್ಷಿದಾರರ ಹೆಸರು : ಬೇಬಿ ಚವ್ಹಾಣ

ತಂದೆ/ಗಂಡನ ಹೆಸರು: ಚಂದ್ರಶೇಖರ

ವಯಸ್ಸು : **48** ವರ್ಷ

ಉದ್ಯೋಗ : ಗೃಹಿಣಿ

ವಾಸಸ್ಥಳ : *ಹಂಚನಾಳ ಎಲ್.ಟಿ. ನಂ.1*

**ಸಾಕ್ಷಿಗೆ ಇಂದು ದಿನಾಂಕ :- 17.10.2023 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

1. ಮೃತ ಚಂದ್ರಶೇಖರ ನನ್ನ ಗಂಡನಾಗಬೇಕು. ಚಾ.ಸಾ.1 ಮತ್ತು 13 ನನ್ನ ಮಕ್ಕಳು. ನನಗೆ ಚಾ.ಸಾ.14 ರಿಂದ 18 ಗೊತ್ತು. ಚಾ.ಸಾ.20 ರಿಂದ 27 ನನ್ನ ಸಂಬಂಧಿಕರು. ಚಾ.ಸಾ.28 ರಿಂದ 32 ರವರು ನನಗೆ ಗೊತ್ತು. ನನಗೆ ಈ ಪ್ರಕರಣದ ಆರೋಪಿತರು ಗೊತ್ತು. ನಾವು ಹಂಚನಾಳ ತಾಂಡಾದಲ್ಲಿ ವಾಸಿಸುತ್ತೇವೆ. ಆರೋಪಿತರೂ ಸಹ ಹಂಚನಾಳ ತಾಂಡಾದಲ್ಲಿಯೇ ವಾಸಿಸುತ್ತಾರೆ. ಆರೋಪಿತರ ಮನೆ ನಮ್ಮ ಮನೆಯ ಮುಂದುಗಡೆಯೇ ಇದೆ.

2. ಸನ್ 2016 ಕ್ಕಿಂತ ಎರಡು ವರ್ಷ ಪೂರ್ವದಲ್ಲಿ 2 ನೇ ಆರೋಪಿ ಕಿಶನ್ ನನ್ನ ಯಜಮಾನರ ಕಡೆಯಿಂದ ಐದು ಲಕ್ಷ ರೂಪಾಯಿ ತೆಗೆದುಕೊಂಡಿದ್ದ. ನನ್ನ ಯಜಮಾನರು 2 ನೇ ಆರೋಪಿಗೆ ಅವರು ಕೊಟ್ಟಿದ್ದ ದುಡ್ಡನ್ನು ವಾಪಸ್ ಕೇಳುತ್ತಿದ್ದರು. ನನ್ನ ಯಜಮಾನರು 2 ನೇ ಆರೋಪಿಗೆ ಆತ ಪಡೆದುಕೊಂಡ ಹಣ ವಾಪಸ್ ಕೇಳಿದಾಗ ಎಷ್ಟು ಸಲ ಕೇಳ್ತಿಯಾ, ಇನ್ನೊಮ್ಮೆ ಕೇಳಿದರೆ ನಿನ್ನ ಖಲಾಸ ಮಾಡುತ್ತೇನೆ ಅಂದಿದ್ದರು.

3. ದಿನಾಂಕ 07.07.2016 ರಂದು ಸಂಜೆ 5.30 ಘಂಟೆಗೆ ನಾನು ನನ್ನ ಗಂಡ-

**ಎಸ್.ಸಿ.ನಂ.74/2020**
**ಪಿಡಬ್ಲ್ಯೂ- 02 (ಸಿಡಬ್ಲ್ಯೂ-12)**

ಮಕ್ಕಳು ನಮ್ಮ ಮನೆಯ ಎದುರುಗಡೆ ಕುಳಿತಿದ್ದೆವು. ಆ ದಿನ ರಂಜಾನ ಹಬ್ಬ ಇತ್ತು, ಕಾರಣ ಸೂಟಿ ಇತ್ತು. ಆಗ ಆರೋಪಿ ನಂ.1 ರಿಂದ 6 ಅವರ ಮನೆಯಲ್ಲಿಯೇ ಇದ್ದರು. ಆ ಸಮಯದಲ್ಲಿ 1ನೇ ಆರೋಪಿ ಆಕಾಶ ನಮ್ಮ ಮನೆಯ ಹತ್ತಿರ ಬಂದು ನನ್ನ ಯಜಮಾನರಿಗೆ ನೀನು ರೊಕ್ಕ ಕೇಳಿದ್ದಿಯಾ ನಮ್ಮ ಮನೆಯ ಹತ್ತಿರ ಬಾ ಕೊಡುತ್ತೇವೆ ಎಂದ. ಆಗ ನನ್ನ ಯಜಮಾನರು 1ನೇ ಆರೋಪಿ ಆಕಾಶನ ಹಿಂದಿನಿಂದ ಅವರ ಮನೆಗೆ ಹೋದರು. ನಂತರ ನಾನು ಮತ್ತು ಚಾ.ಸಾ.1 ಸಹ ನನ್ನ ಯಜಮಾನರ ಹಿಂದಿನಿಂದ ಆರೋಪಿತರ ಮನೆಗೆ ಹೋದೆವು. ನನ್ನ ಯಜಮಾನರು ಆರೋಪಿ ಮನೆಯ ಒಳಗಡೆ ಹೋಗುವಷ್ಟರಲ್ಲಿ 6ನೇ ಆರೋಪಿ ಬೇಬಿ ಅಲ್ಲಿ ನಿಂತಿದ್ದು, ಅವಳು ನನ್ನ ಯಜಮಾನರ ಕಣ್ಣಲ್ಲಿ ಖಾರ ಎರಚಿದಳು. ಆಗ ನನ್ನ ಯಜಮಾನರು ಕಣ್ಣು ಹಿಡಿದುಕೊಂಡರು. ಆಗ ಆರೋಪಿ ನಂ.2 ರಿಂದ 4 ನಮ್ಮ ಯಜಮಾನರಿಗೆ ಒತ್ತಿ ಹಿಡಿದರು. ಕಾನೂನಿನೊಂದಿಗೆ ಸಂಘರ್ಷಕ್ಕೊಳಗಾದ ಬಾಲಕ 1ನೇ ಆರೋಪಿ ಆಕಾಶ ಈತನು ತನ್ನ ಕೈಯಲ್ಲಿದ್ದ ಹತ್ಯಾರದಿಂದ ನನ್ನ ಯಜಮಾನರ ತಲೆಗೆ, ಗೋಣಿಗೆ ಸಿಕ್ಕಂಗ ಹೊಡೆದ. 5ನೇ ಆರೋಪಿ ಪ್ರಕಾಶ ಚಂದು ರಜಪೂತ ತನ್ನ ಕೈಯಲ್ಲಿದ್ದ ಜಂಬೆಯಿಂದ ನನ್ನ ಯಜಮಾನರ ಎದೆಗೆ, ಹೊಟ್ಟೆಗೆ, ಕೈಗೆ ಚುಚ್ಚಿದ. ನಮ್ಮ ಯಜಮಾನರು ಚೀರುತ್ತಿದ್ದಾಗ ನಾವು ಬಿಡಿಸಲು ಹೋದೆವು. ಆಗ ಆರೋಪಿತರು ನಮಗೆ ನೀವು ಬಂದರೆ ನಿಮ್ಮನ್ನೂ ಸಹ ಖಲಾಸ ಮಾಡುತ್ತೇವೆ ಅಂತಾ ಅಂದರು. ನಾವು ಹೆದರಿಕೊಂಡು ಅಲ್ಲೇ ನಿಂತುಬಿಟ್ಟೆವು. ನಮ್ಮ ಯಜಮಾನರ ದೇಹದಿಂದ ರಕ್ತ ಸೋರುತ್ತಿತ್ತು. ನಂತರ ನನ್ನ ಯಜಮಾನರು ನೆಲಕ್ಕೆ

ಬಿದ್ದರು. ನನ್ನ ಯಜಮಾನರು ನೆಲಕ್ಕೆ ಬಿದ್ದ ನಂತರ ಆರೋಪಿತರು ಅಲ್ಲಿಂದ ಹೋದರು. ನಾವು ಹೋಗಿ ನಮ್ಮ ಯಜಮಾನರನ್ನು ನೋಡಲಾಗಿ ಮೈಯಿಂದ ಎಲ್ಲಾ ರಕ್ತ ಸೋರಿ ನಮ್ಮ ಯಜಮಾನರು ತೀರಿಕೊಂಡಿದ್ದರು. ಘಟನೆ ಆದಾಗ ಸಮಯ ಸಂಜೆ 6.30 ಘಂಟೆಯಾಗಿತ್ತು. ನಂತರ ನಾವು ನನ್ನ ಯಜಮಾನರ ದೇಹವನ್ನು ಎತ್ತಿ ನಮ್ಮ ಅಂಗಳದಲ್ಲಿಟ್ಟೆವು. ನಂತರ ನಮ್ಮ ಯಜಮಾನರ ದೇಹವನ್ನು ಅಲ್-ಅಮೀನ ಆಸ್ಪತ್ರೆಗೆ ತಂದೆವು. ಆಗ ಅಲ್ಲಿ ಪರೀಕ್ಷೆ ಮಾಡಿ ಅವರು ತೀರಿಕೊಂಡಿದ್ದಾರೆ ಎಂದು ಹೇಳಿದರು. ನನ್ನ ಮಗ ಚಾ.ಸಾ.1 ದೂರು ಕೊಟ್ಟ. ನಾನು ಆ ಆಯುಧಗಳನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ಯಜಮಾನರಿಗೆ ಹೊಡೆಯಲು ಬಳಸಿದ ಜಂಬ್ಯಾ ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.3 ಎಂದು ಗುರುತಿಸಲಾಗಿದೆ. ಹತ್ಯಾರ ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.10 ಎಂದು ಗುರುತಿಸಲಾಗಿದೆ. ಆ ದಿನ ನನ್ನ ಯಜಮಾನರು ತೊಟ್ಟಿಕೊಂಡ ಬಟ್ಟೆ ಮತ್ತು ಶೂಗಳನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ಯಜಮಾನರ ಶೂಗಳನ್ನು ನೋಡುತ್ತಿದ್ದು, ಅವು ಈಗಾಗಲೇ ಎಂ.ಓ.5 ಎಂದು ಗುರುತಿಸಲಾಗಿವೆ. ನನ್ನ ಯಜಮಾನರ ಟೀಶರ್ಟ ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.6 ಎಂದು ಗುರುತಿಸಲಾಗಿದೆ. ಹಾಫ ಬನಿಯನ್ ನೊಡುತ್ತಿದ್ದೇನೆ, ಅದು ಈಗಾಗಲೇ ಎಂ.ಓ.7 ಎಂದು ಗುರುತಿಸಲಾಗಿದೆ. ನೈಟ ಪ್ಯಾಂಟು ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.8 ಎಂದು ಗುರುತಿಸಲಾಗಿದೆ. ನನ್ನ ಯಜಮಾನರ ಅಂಡರವೇಯರ ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.9 ಎಂದು ಗುರುತಿಸಲಾಗಿದೆ. ನನ್ನ ಗಂಡನ ಕರಿ ಉಡದಾರ ನೋಡುತ್ತಿದ್ದು, ಅದು ಈಗಾಗಲೇ

**ಎಸ್.ಸಿ.ನಂ.74/2020**
**ಪಿಡಬ್ಲ್ಯೂ- 02 (ಸಿಡಬ್ಲ್ಯೂ-12)**

ಎಂ.ಓ.11 ಎಂದು ಗುರುತಿಸಲಾಗಿದೆ. ನನ್ನ ಯಜಮಾನರ ಕೊರಳಲ್ಲಿಯ ಕರಿದಾರ ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.12 ಎಂದು ಗುರುತಿಸಲಾಗಿದೆ. ನನ್ನ ಯಜಮಾನರ ಬಲಗೈಯಲ್ಲಿದ್ದ ಕೆಂಪು ದಾರ ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.13 ಎಂದು ಗುರುತಿಸಲಾಗಿದೆ. ನನ್ನ ಯಜಮಾನರ ಬೆಳ್ಳಿ ನಮೂನೆಯ ಉಡದಾರ ನೋಡುತ್ತಿದ್ದು, ಅದು ಈಗಾಗಲೇ ಎಂ.ಓ.14 ಎಂದು ಗುರುತಿಸಲಾಗಿದೆ. ಆರೋಪಿ ನಂ.2 ರಿಂದ 6 ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದು, ಅವರನ್ನು ಈ ದಿನ ನೋಡಿ ಗುರುತಿಸಿದ್ದೇನೆ. ನಾನು 1 ನೇ ಆರೋಪಿ ಆಕಾಶನನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು:- ಶ್ರೀ ಎಸ್.ಆರ್.ಕೆ., ವಕೀಲರಿಂದ ಆರೋಪಿತರ ಪರಃ**

*ಶ್ರೀ ಎಸ್.ಆರ್.ಕೆ., ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ 231(2)ರಲ್ಲಿ ಅರ್ಜಿ ಸಲ್ಲಿಸಿ ಈ ಸಾಕ್ಷಿ ಹಾಗೂ ಚಾ.ಸಾ.1. 13 ರಿಂದ 17ರವರ ಪಾಟಿ ಸವಾಲನ್ನು ಏಕಕಾಲದಲ್ಲಿ ಮಾಡುವುದಾಗಿ ಹೇಳಿ ಪಾಟಿ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಅವರ ಕೋರಿಕೆಯ ಮೇಲೆ ಪಾಟಿ ಸವಾಲನ್ನು ಮುಂದೂಡಲಾಯಿತು.*

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.